**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1767/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಸುರೇಶ್ ಕಲ್ಯಾಡ್ರಾ | ಫ್ರಾಸಾ-1 |
| ತಂದೆಯ ಹೆಸರು | : ಮಲ್ಲಪ್ಪ | ಚಾಸಾ-1 |
| ವಯಸ್ಸು | : 29 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಅಬಕಾರಿ ಪೇದೆ | ದಿನಾಂಕಃ 13.10.2025. |
| ವಾಸಸ್ಥಳ | : ಮೂಡಿಗೆರೆ ವಲಯ. | |

**:ಮುಖ್ಯ ವಿಚಾರಣೆಃ ಫ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನಾನು ದಿ.04.10.2019 ರಿಂದ ಮೂಡಿಗೆರೆ ಅಬಕಾರಿ ನಿರೀಕ್ಷಕರ ಕಚೇರಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.17.04.2024 ರಂದು ರಾ.9.00ರ ಸಮಯಕ್ಕೆ ಲೋಕಸಭೆ ಚುನಾವಣೆ ಸಂಬಂಧ ನಾನು ಚಾಸಾ-2 ಮತ್ತು 9 ರವರೊಂದಿಗೆ ಮೂಡಿಗೆರೆ ಪಟ್ಟಣದಲ್ಲಿ ಗಸ್ತು ಮಾಡುತ್ತಿದ್ದಾಗ ಮೂಡಿಗೆರೆ ಗಂಗನಮಕ್ಕಿ ಕೆ.ಎಂ. ರಸ್ತೆಯಲ್ಲಿ KA-05-MA-4589 ಮಾರುತಿ 800 ಕಾರಿನಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು ಅದರಂತೆ ಮೂಡಿಗೆರೆ ಬಸ್ ನಿಲ್ದಾಣದ ಬಳಿ ಇದ್ದ ವ್ಯಕ್ತಿಗಳನ್ನು ಪಂಚರಾಗಿ ಬರುವಂತೆ ಕೋರಿದ್ದು ಅವರು ನಿರಾಕರಿಸಿರುತ್ತಾರೆ. ಈ ಕಾರಣ ಸಿಬ್ಬಂದಿಗಳಾದ ನಮ್ಮನ್ನೇ ಪಂಚರಾಗಿ ಪರಿಗಣಿಸಿ ಗಂಗನಮಕ್ಕಿ ಕಡೆಗೆ ಹೋಗುತ್ತಿರುವಾಗ ಮಾಹಿತಿ ಇದ್ದ ವಾಹನ ವೇಗವಾಗಿ ಚಲಿಸುತ್ತಿದ್ದು ಸದರಿ ವಾಹನವನ್ನು ಗಂಗನಮಕ್ಕಿಯ ಹೆಚ್.ಪಿ. ಪೆಟ್ರೋಲ್ ಬಂಕ್ ಬಳಿ ಅಡ್ಡಗಟ್ಟಿ ನಿಲ್ಲಿಸಿ ನೋಡಿದಾಗ ಆರೋಪಿಯು ಸದರಿ ಕಾರಿನ ಚಾಲಕನಾಗಿದ್ದು ಆತನ ಹೆಸರು ಮತ್ತು ವಿಳಾಸ ತಿಳಿದುಕೊಂಡು ಮಾಹಿತಿ ಬಗ್ಗೆ ತಿಳಿಸಿದಾಗ ಆರೋಪಿಯು ಗಾಬರಿಗೊಂಡಿದ್ದು ಸ್ಥಳದಲ್ಲಿ ಶೋಧನಾ ಸಮುಚ್ಚಿತ್ತ ಆಧಾರ ತಯಾರಿಸಿಕೊಂಡು ಆರೋಪಿಯ ಕಾರನ್ನು ಪರಿಶೀಲಿಸಿದಾಗ ವಾಹನದ ಹಿಂಬದಿ ಸೀಟ್ ನಲ್ಲಿ ಎರಡು ರಟ್ಟಿನ ಬಾಕ್ಸ್ ಗಳು ಇದ್ದು ಒಂದು ಬಾಕ್ಸ್ ನೊಳಗೆ ತಲಾ 90 ಎಂ.ಎಲ್. ನಷ್ಟು ಮದ್ಯ ತುಂಬಿದ DK whisky ಯ 96 ಟೆಟ್ರಪ್ಯಾಕ್ ಗಳು ಹಾಗೂ ಮತ್ತೊಂದು ಬಾಕ್ಸ್ ನಲ್ಲಿ Capten martin whisky ಯ 96 ಟೆಟ್ರಪ್ಯಾಕ್ ಗಳು ಇದ್ದವು. ಅವುಗಳ ಬಗ್ಗೆ ಆರೋಪಿಯನ್ನು ವಿಚಾರಿಸಿದಾಗ ಮಾರಾಟ ಮಾಡುವ ಉದ್ದೇಶದಿಂದ ಅವುಗಳನ್ನು ತೆಗೆದುಕೊಂಡು ಹೋಗುತ್ತಿರುವುದಾಗಿ ಹಾಗೂ ತನ್ನ ಬಳಿ ಯಾವುದೇ ಪರವಾನಗೆ ಇಲ್ಲ ಎಂದು ತಿಳಿಸಿರುತ್ತಾರೆ.

ಆರೋಪಿಯ ವಶದಲ್ಲಿ ಸಿಕ್ಕ ಮದ್ಯದ ಟೆಟ್ರಪ್ಯಾಕ್ ಗಳ ಪೈಕಿ ತಲಾ 26 ಟೆಟ್ರಪ್ಯಾಕ್ಗಳನ್ನು ಮಾದರಿಗೆಂದು ತೆಗೆದು ಅವುಗಳನ್ನು ನಿಯಮಾನುಸಾರ ಸೀಲು ಮಾಡಿ ವಶಕ್ಕೆ ಪಡೆದಿರುತ್ತೇವೆ. ಸದರಿ ಸ್ಥಳದಲ್ಲಿ ರಾ.9.15 ರಿಂದ 10.15 ರವರೆಗೂ ಮಹಜರ್ ಬರೆದು ಫೋಟೋ ತೆಗೆಸಲಾಯಿತು. ಆರೋಪಿಗೆ ನೋಟೀಸು ಜಾರಿ ಮಾಡಿ ವಶಕ್ಕೆ ಪಡೆದ ಮಾಲುಗಳೊಂದಿಗೆ ಕಚೇರಿಗೆ ಹಾಜರಾದೆವು. ನಂತರ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದೇನೆ.

ಸಾಕ್ಷಿಯು ದಿ.17.04.2024 ರ ಮಹಜರ್, ಮಾದರಿ ಸೀಲಿನ ನಕಲಿನ ಮೇಲೆ ತಮ್ಮ ಸಹಿಗಳನ್ನು ಗುರುತಿಸಿ, ಒಂದು ಪೋಟೋವನ್ನು ನೋಡಿ ಅದನ್ನು ಮಹಜರ್ ಕಾಲಕ್ಕೆ ತೆಗೆದ ಬಗ್ಗೆ ಗುರುತಿಸುತ್ತಾರೆ. ಮಹಜರ್ ನ್ನು ನಿಪಿ-1, ಮಾದರಿ ಸೀಲಿನ ನಕಲನ್ನು ನಿಪಿ-2, ಸಾಕ್ಷಿಯ ಸಹಿಗಳನ್ನು

ನಿಪಿ-1(ಎ) ಮತ್ತು 2(ಎ), ಪೋಟೋವನ್ನು ಸಿಡಿ ಮತ್ತು ಪ್ರಮಾಣಪತ್ರದೊಂದಿಗೆ ನಿಪಿ-3 ರಿಂದ 5 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಬ್ಯಾಗ್‌ಗಳು ಹಾಗೂ ಅದರೊಳಗಿರುವ ಟೆಟ್ರಪ್ಯಾಕ್ ಗಳನ್ನು ಮಾದರಿ ತೆಗೆದ ಬಗ್ಗೆ ಗುರುತಿಸುತ್ತಾರೆ. ಅವುಗಳನ್ನು ಕ್ರಮವಾಗಿ ಎಂ.ಒ.1 ರಿಂದ 4, ಸಾಕ್ಷಿಯ ಸಹಿಯನ್ನು ಎಂ.ಒ.1(ಎ) ಮತ್ತು 3(ಎ) ಎಂದು ಗುರುತಿಸಲಾಯಿತು. ಆರೋಪಿಯು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ.ಕೆ.ಪಿ. ವಕೀಲರಿಂದಃ</u>

ನಾನು ಹೇಳಿದ ದಿನಾಂಕದಂದು ಮೂಡಿಗೆರೆ ಟೌನ್ ಬಸ್ ನಿಲ್ದಾಣ ಮತ್ತು ಕೆ.ಎಂ. ರಸ್ತೆಯಲ್ಲಿ ಗಸ್ತು ಮಾಡಿದ್ದೆವು. ಆ ದಿನ ರಾ.8.30 ರ ಸಮಯಕ್ಕೆ ಕಚೇರಿಯಿಂದ ಹೊರಟಿದ್ದೆವು. ಮಾಹಿತಿ ಬಂದಾಗ ರಾ.9.00 ಗಂಟೆ ಸಮಯವಾಗಿತ್ತು. ಆ ದಿನ ಗಂಗನಮಕ್ಕಿ ತಲುಪಿದಾಗ ರಾ.9.05 ರ ಸಮಯವಾಗಿತ್ತು. ಆರೋಪಿಯ ವಾಹನವನ್ನು ಸುಮಾರು 10 ನಿಮಿಷಗಳ ಕಾಲ ಪರಿಶೀಲಿಸಿದ್ದೆವು. ಮಹಜರ್ ನ್ನು ರಾ.9.15 ರ ಸಮಯಕ್ಕೆ ಬರೆಯಲು ಪ್ರಾರಂಭಿಸಿದ್ದೆವು. ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ದಾಳಿ ಕಾಲಕ್ಕೆ ಸ್ಥಳದಲ್ಲಿ ಸಾರ್ವಜನಿಕರು ಇರಲಿಲ್ಲ. ಕೆ.ಎಂ. ರಸ್ತೆ ರಾಷ್ಟ್ರೀಯ ಹೆದ್ದಾರಿ ಹಾಗೂ ಅಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ.

ನಿಪಿ-3 ರ ಪೋಟೋವನ್ನು ನಾನು ಹೇಳಿದ ಸ್ಥಳದಲ್ಲಿ ತೆಗೆಯಲಾಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ದಿನಾಂಕದಂದು ಆರೋಪಿ ತನ್ನ ಕಾರಿನಲ್ಲಿ ಮದ್ಯ ಸಾಗಾಣಿಕೆ ಮಾಡುತ್ತಿದ್ದರು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆರೋಪಿಯಿಂದ ಮದ್ಯದ ಪ್ಯಾಕೇಟ್ ಗಳನ್ನು ವಶಕ್ಕೆ ಪಡೆದು ಮಾದರಿ ತೆಗೆದಿದ್ದೆವು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಮೇಲಾಧಿಕಾರಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.